**ದಿನಾಂಕಃ 07/01/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ- ಶ್ರೀ ಹೆಚ್.ಎಸ್.ಎ. ವಕೀಲರಿಂದ**

ದಿಃ 05.04.1979 ರಂದು ನನ್ನ ತಂದೆಯ ಸಮೇತ ನನ್ನ ಮೂರು ಜನ ಅಣ್ಣ - ತಮ್ಮಂದಿರು ಸೇರಿ ಊರಿನಲ್ಲಿ ವಿಭಾಗ ಪತ್ರವನ್ನು ಮಾಡಿಕೊಳ್ಳಲಾಯಿತು ಎಂದರೆ ಸರಿ. ಸಾಕ್ಷಿಗೆ ಒಂದು ವಿಭಾಗ ಪತ್ರವನ್ನು ತೋರಿಸಿ ಆ ರೀತಿ ದಿನಾಂಕ 05.04.1979 ರಂದು ಆಗಿರುವ ವಿಭಾಗ ಪತ್ರ ಸದರಿ ವಿಭಾಗ ಪತ್ರವೇ ಎಂದುಕೇಳಲಾಗಿ ಸಾಕ್ಷಿಯು ಅದನ್ನು ನೋಡಿ ಹೌದು ಎಂದು ನುಡಿಯುತ್ತಾರೆ. ಸದರಿ ವಿಭಾಗ ಪತ್ರದ ಪ್ರಕಾರ ಹಿತ್ತಲ ಹೊಲ ಸರ್ವೆ ನಂ. 4ರಲ್ಲಿ ಒಟ್ಟು 8 ಗುಂಟೆ ಎಂದರೆ ಸರಿ. ಸದರಿ ವಿಭಾಗ ಪತ್ರದ ರೀತ್ಯಾ ಸದರಿ 8 ಗುಂಟೆಯಲ್ಲಿ ವಾದಿ ಹಾಗೂ 2ನೇ ಪ್ರತಿವಾದಿಗೆ ತಲಾ 3 ಗುಂಟೆಯಂತೆ ಹಾಗೂ 1ನೆ ಪ್ರತಿವಾದಿಗೆ ಗುಂಟೆಯಂತೆ ಹಿಸ್ಸೆ ಆಗಿರುತ್ತದೆ ಎಂದರೆ ಸಾಕ್ಷಿಯು ವಿಭಾಗ ಪತ್ರದ ರೀತ್ಯಾ ಆ ರೀತಿ ಹಿಸ್ಸೆ ಆಗಿರುವುದು ಹೌದು ಆದರೆ ಪಹಣಿ ಪ್ರಕಾರ ನಮಗೆ ಮೂರೂ ಜನರಿಗೂ ಒಂದೊಂದು ಗುಂಟೆ ಜಮೀನು ಬಂದಿರುತ್ತದೆ ಎಂದು ನುಡಿಯುತ್ತಾರೆ. ಆ ರೀತಿ ಪಹಣಿಯಲ್ಲಿ ತಲಾ ಒಂದು ಗುಂಟೆ ಎಂದು ನಮೂದಾಗಿರುವುದನ್ನು ವಿಭಾಗ ಪತ್ರದ ಪ್ರಕಾರ ತಿದ್ದುಪಡಿ ಮಾಡಿಸಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ಯಾವುದೇ ತೊಂದರೆ ಇರಲಿಲ್ಲ ಆದರೆ ನಮಗೆ ತಿಳಿಯಲಿಲ್ಲ ಎಂದು ನುಡಿಯುತ್ತಾರೆ.

ಸರ್ವೆ ನಂ. 15 ರಲ್ಲಿ ಒಟ್ಟು 2 ಎಕರೆ 23 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಸದರಿ 2 ಎಕರೆ 23 ಗುಂಟೆ ಪೈಕಿ ವಿಭಾಗ ಪತ್ರದ ಪ್ರಕಾರ ನನಗೆ 20 ಗುಂಟೆ, 2ನೇ ಪ್ರತಿವಾದಿಗೆ 1 ಎಕರೆ 2ವರೆ ಗುಂಟೆ ಹಾಗೂ ವಾದಿಗೆ 1 ಎಕರೆ ಅರ್ಧ ಗುಂಟೆ ಜಮೀನು ವಿಭಾಗ ಆಗಿರುವುದು ಎಂದರೆ ಸರಿ. ಅದೇ ರೀತಿ ಸರ್ವೆ ನಂ. 18 ರ ಸ್ವತ್ತು ಗದ್ದೆ ಎಂದರೆ ಸರಿ. ಸದರಿ ಸರ್ವೆ ನಂ. 18ರಲ್ಲಿ ಒಟ್ಟು 16 ಗುಂಟೆ ಇತ್ತು ಎಂದರೆ ಸರಿ. ವಿಭಾಗ ಪತ್ರದ ರೀತ್ಯಾ ಸದರಿ ಸರ್ವೆ ನಂ. 18 ರಲ್ಲಿ ನನಗೆ 5 ಗುಂಟೆ, 2ನೇ ಪ್ರತಿವಾದಿಗೆ 5 ಗುಂಟೆ ಹಾಗೂ ವಾದಿಗೆ 6 ಗುಂಟೆ ಜಮೀನು ಬಂದಿತ್ತು ಎಂದರೆ ಸರಿ.

ಸರ್ವೆ ನಂ. 21 ರಲ್ಲಿ ಒಟ್ಟು 3 ಎಕರೆ ಜಮೀನು ಇತ್ತು ಎಂದರೆ ಸರಿ. ಸದರಿ 3 ಎಕರೆ ಪೈಕಿ ವಿಭಾಗ ಪತ್ರದ ರೀತ್ಯಾ ನನಗೆ 1 ಎಕರೆ 8 ಗುಂಟೆ, 2ನೇ ಪ್ರತಿವಾದಿಗೆ 33 ಗುಂಟೆ ಹಾಗೂ ವಾದಿಗೆ 39 ಗುಂಟೆ ಜಮೀನು ಹೋಗಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರಿದು ವಾದಿಯ ಹಿಸ್ಸೆಗೆ ಬಂದ ಜಮೀನಿನಲ್ಲಿ

ಬಾವಿ ಇತ್ತು ಸದರಿ ವಿಭಾಗದ ಸಮಯದಲ್ಲಿ ಎಲ್ಲರೂ ಎರಡೆರಡು ಗುಂಟೆ ಜಮೀನನ್ನು ಬಿಟ್ಟುಕೊಡಬೇಕಾಗಿಯೂ, ಸದರಿ ಬಾವಿ ಬಹುತ್ವದ ಬಾವಿಯಾಗಿ ಇರಲಿ ಎಂದು ಹೇಳಿದ್ದು ಈಗ ವಾದಿ ಸದರಿ ಬಾವಿಯನ್ನು ಮುಚ್ಚಿ ಹಾಕಿರುತ್ತಾರೆ ಎಂದು ಹೇಳುತ್ತಾರೆ ಸಾಕ್ಷಿಯು ಮುಂದುವರಿದು ಸದರಿ 2 ಗುಂಟೆ ಜಮೀನನ್ನು ವಾಪಸ್ಸು ಕೊಡಿ ಎಂದು ಕೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಆ ರೀತಿ ಬಾವಿ ಇದ್ದ ವಿಚಾರವನ್ನು ಹಾಗೂ ಅದನ್ನು ಮುಚ್ಚಿ ಹಾಕಿದ ವಿಚಾರವನ್ನು ಹಾಗೂ 2 ಗುಂಟೆ ಜಮೀನು ವಾಪಸ್ಸು ಬರಬೇಕು ಎನ್ನುವ ವಿಚಾರವನ್ನು ನನ್ನ ಲಿಖಿತ ಹೇಳಿಕೆಯಲ್ಲಿ ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಕೇಳಲು ತೊಂದರೆ ಇರಲಿಲ್ಲ.

ಸದರಿ 2 ಗುಂಟೆಯನ್ನು ಸೇರಿಸಿ ಜ್ಯೇಷ್ಠ ಪಾಲಾಗಿ ನಿಮಗೆ 1 ಎಕರೆ 8 ಗುಂಟೆ ಸ್ವತ್ತನ್ನು ಕೊಡಲಾಗಿತ್ತು ಎಂದರೆ ಸಾಕ್ಷಿಯು ಇನ್ನೊಂದು ಕಡೆ 3 ಗುಂಟೆ ತೋಟ ಇದ್ದು, ಅದನ್ನು ವಾದಿ ಹಾಗೂ 2ನೇ ಪ್ರತಿವಾದಿಗೆ ತಲಾ 1ವರೆ ಗುಂಟೆಯಂತೆ ವಿಭಾಗ ಮಾಡಿಕೊಡಲಾಗಿತ್ತು ಆದ್ದರಿಂದ ನನಗೆ ಸರ್ವೆ ನಂ. 21 ರಲ್ಲಿ 1 ಎಕರೆ 8 ಗುಂಟೆ ಸ್ವತ್ತನ್ನು ಕೊಡಲಾಗಿತ್ತು ಎಂದು ನುಡಿಯುತ್ತಾರೆ. ಸರ್ವೆ ನಂ. 28ರಲ್ಲಿ ಇದ್ದ ಸ್ವತ್ತು ರೈಲು ಮಾರ್ಗದ ಹೊಲ ಎಂದರೆ ಸರಿ. ಸದರಿ ಸರ್ವೆ ನಂ. 28 ರಲ್ಲಿ ಒಟ್ಟು 1 ಎಕರೆ 30 ಗುಂಟೆ ಜಮೀನು ಇತ್ತು ಎಂದರೆ ಸರಿ. ಸದರಿ 1 ಎಕರೆ 30 ಗುಂಟೆಯನ್ನು ವಿಭಾಗ ಪತ್ರದ ರೀತ್ಯಾ ನನಗೆ 1 ಎಕರೆ ಹಾಗೂ 1 ಮತ್ತು 2ನೇ ಪ್ರತಿವಾದಿಯರಿಗೆ ತಲಾ 15 ಗುಂಟೆಯಂತೆ ವಿಭಾಗ ಮಾಡಿಕೊಡಲಾಗಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರಿದು ಪಕ್ಕದಲ್ಲಿ ದನ ಮೇಯಿಸಲೆಂದು ಪಾಳು ಭೂಮಿ ಇತ್ತು ಅದರಲ್ಲಿ ನನಗೆ ಯಾವುದೇ ಸ್ವತ್ತನ್ನು ಕೊಟ್ಟಿಲ್ಲ ಆದ್ದರಿಂದ ನನಗೆ ಮೋಸ ಆಗಿರುತ್ತದೆ ಎಂದು ನುಡಿಯುತ್ತಾರೆ.

ಸರ್ವೆ ನಂ. 95 ಈಗ ಸರ್ವೆ ನಂ. 107 ಎಂದು ಆಗಿರುತ್ತದೆ ಎಂದರೆ ಸರಿ. ದಿಃ 05.04.1979 ರಲ್ಲಿ ಆಗಿದ್ದ ವಿಭಾಗ ಪತ್ರದಲ್ಲಿ ನಾನು, ವಾದಿ, 2ನೇ ಪ್ರತಿವಾದಿ ನನ್ನ ತಂದೆ ಸಹಿ ಮಾಡಿರುತ್ತೇವೆ ಎಂದರೆ ಸರಿ. ಸದರಿ ವಿಭಾಗ ಪತ್ರಕ್ಕೆ ಸಾಕ್ಷಿಗಳು ಕೂಡ ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ವಿಭಾಗ ಪತ್ರವನ್ನು ಚನ್ನೇಗೌಡ ಎಂಬುವವರು ಬರೆದಿರುತ್ತಾರೆ. ಸದರಿ ವಿಭಾಗ ಪತ್ರದ ಮೂಲ ಪ್ರತಿಯನ್ನು 2ನೇ ಪ್ರತಿವಾದಿ ಇಟ್ಟುಕೊಂಡಿದ್ದರು. ನನ್ನ ತಂದೆ 2ನೇ ಪ್ರತಿವಾದಿಯ ಜೊತೆಯೇ ಇದ್ದುದ್ದುರಿಂದ ಸದರಿ ವಿಭಾಗ ಪತ್ರದ ಮೂಲ ಪ್ರತಿಯನ್ನು 2ನೇ ಪ್ರತಿವಾದಿ ಇಟ್ಟುಕೊಂಡಿದ್ದರು ಎಂದು ಮುಂದುವರಿದು ನುಡಿಯುತ್ತಾರೆ. ಸದರಿ

ವಿಭಾಗ ಪತ್ರದ ರೀತ್ಯಾ ಖಾತೆ ಮಾಡಿಸುವ ಸಮಯದಲ್ಲಿ ನಾನು ಹೋಗಿರಲಿಲ್ಲ, 2ನೇ ಪ್ರತಿವಾದಿಯೇ ಮಾಡಿಸಿಕೊಟ್ಟಿರುತ್ತಾರೆ.

ಸರ್ವೆ ನಂ. 95 ರಲ್ಲಿ ಇರುವುದು ಬಾರೆ ಹೊಲ ಸ್ವತ್ತು ಎಂದರೆ ಸರಿ. ಸದರಿ ಸರ್ವೆ ನಂ. 95 ರಲ್ಲಿ ಒಟ್ಟು 4 ಎಕರೆ ಸ್ವತ್ತು ಇತ್ತು ಎಂದರೆ ಸರಿ. ವಿಭಾಗ ಪತ್ರದ ರೀತ್ಯಾ ಸದರಿ 4 ಎಕರೆ ಪೈಕಿ ನನಗೆ ಹಾಗೂ 2ನೇ ಪ್ರತಿವಾದಿಗೆ ತಲಾ 1 ಎಕರೆಯಂತೆ ಹಾಗೂ ವಾದಿಗೆ 2 ಎಕರೆಯಂತೆ ವಿಭಾಗ ಮಾಡಿಕೊಡಲಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸದರಿ 4 ಎಕರೆ ಪೈಕಿ ಎಲ್ಲರಿಗೂ ಒಂದೊಂದು ಎಕರೆಯಂತೆ ವಿಭಾಗ ಆಗಿತ್ತು. 2ನೇ ಪ್ರತಿವಾದಿ ವಿಭಾಗ ಪತ್ರವನ್ನು ತಿದ್ದಿ 1 ಎಕರೆ ಎಂದು ಇದ್ದುದ್ದನ್ನು 2 ಎಕರೆ ಎಂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ದಿಃ 05.04.1979 ರ ವಕೀಲರ ಬಳಿ ಇರುವ ವಿಭಾಗ ಪತ್ರದ ಪ್ರತಿಯನ್ನು ತೋರಿಸಿ ಸದರಿ ಪತ್ರದಲ್ಲಿ ಸದರಿ ಸರ್ವೆ ನಂ. 95ರಲ್ಲಿ 1ನೆ ಪ್ರತಿವಾದಿಗೆ 1 ಎಕರೆ ಎಂದು ಇದ್ದು, 2ನೇ ಪ್ರತಿವಾದಿಗೆ 1 ಎಕರೆ ಎಂದು ಇರುವುದನ್ನು 2 ಎಕರೆ ಎಂಬುದಾಗಿಯೂ, ವಾದಿಯ 2 ಎಕರೆ ಎಂದು ಇರುವುದನ್ನು 1 ಎಕರೆ ಎಂಬುದಾಗಿಯೂ ತಿದ್ದುಪಡಿ ಮಾಡಲಾಗಿದೆ ಎಂದರೆ ಸಾಕ್ಷಿಯು 2ನೇ ಪ್ರತಿವಾದಿಯ ಹಿಸ್ಸೆಯನ್ನು ಮಾತ್ರ ತಿದ್ದಲಾಗಿದೆ ಎಂದು ನುಡಿಯುತ್ತಾರೆ. ಸದರಿ ವಿಭಾಗ ಪತ್ರದಲ್ಲಿ ಸರ್ವೆ ನಂ. 95 ರಲ್ಲಿ ವಾದಿಯ ಹಿಸ್ಸೆಗೆ ಬಂದ ಜಮೀನಿನ ಪೂರ್ವಕ್ಕೆ ಪಿಡಬ್ಲೂಡಿ ರಸ್ತೆ, ಪಶ್ಚಿಮಕ್ಕೆ ಗೋಮಾಳ, ಉತ್ತರಕ್ಕೆ ರಾಮಚಂದ್ರೇಗೌಡರವರ ಜಮೀನು ಹಾಗೂ ದಕ್ಷಿಣಕ್ಕೆ ಕೃಷ್ಣೇಗೌಡರ ಜಮೀನು ಎಂದು ಇದೆ ಎಂದರೆ ಸರಿ. ಸದರಿ ಚೆಕ್ಕುಬಂದಿಯ ಒಳಗಡೆ 1 ಎಕರೆ ಜಮೀನು ಇರುತ್ತದೆ.

ಸದರಿ ಸರ್ವೆ ನಂ. 95ರ ಅಂದರೆ ಈಗ 107 ಎಂದು ಆಗಿರುವುದರ ಒಟ್ಟು ಜಮೀನಿನ ಪೈಕಿ 2 ಎಕರೆಯನ್ನು 1979 ನೇ ಸಾಲಿನಿಂದಲೂ 2ನೇ ಪ್ರತಿವಾದಿಯೇ ಮಾಡುತ್ತಿದ್ದಾರೆ. 1979 ರಲ್ಲಿ ವಿಭಾಗ ಆಗಿದೆ ಎನ್ನಲಾದ ನಂತರ 1988-89 ಸಾಲಿನವರೆಗೂ ವಾದಿ ಮತ್ತು 2ನೇ ಪ್ರತಿವಾದಿ ಜೊತೆಗೇ ಇದ್ದರು ಎಂದರೆ ಸರಿ. 1988-89 ನೇ ಸಾಲಿನಿಂದ ಸದರಿ ಸರ್ವೆ ನಂ. 95 ಬಾರೆ ಹೊಲ 2 ಎಕರೆ ಸ್ವತ್ತನ್ನು ವಾದಿಯೇ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ವಾದಿ ಸದರಿ 2 ಎಕರೆ ಸ್ವತ್ತನ್ನು ಮಾಡುತ್ತಿದ್ದ ಸಮಯದಲ್ಲಿ ವಾದಿ ಯಾವುದೇ ರೀತಿ ತಿದ್ದುಪಡಿ ಮಾಡಿರುವುದಿಲ್ಲ, 1 ಎಕರೆಯನ್ನು 2 ಎಂದರೆ ಎಂಬುದಾಗಿ 2ನೇ ಪ್ರತಿವಾದಿಯೇ ತಿದ್ದುಪಡಿ ಮಾಡಿರುವುದು ಎಂದರೆ ಸರಿ. ಸದರಿ 1 ಎಕರೆಯನ್ನು 2ನೇ ಪ್ರತಿವಾದಿ ಈಗ ಅವರ ಮಕ್ಕಳ ಹೆಸರಿಗೆ ಪಾಲು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಉಳಿಕೆ ಜಮೀನನ್ನು 2ನೇ ಪ್ರತಿವಾದಿ ಅವರ ಮಕ್ಕಳಿಗೆ ಪಾಲು

ಮಾಡಿಕೊಟ್ಟಿಲ್ಲ ಎಂದರೆ ಸರಿ. ಸದರಿ ವಿಭಾಗ ಪತ್ರದಲ್ಲಿ ಸರ್ವೆ ನಂ. 21 ರ ಪೂರ್ವಕ್ಕೆ 1 ಎಕರೆ ಜಮೀನನ್ನು ಒಟ್ಟಿನಲ್ಲಿ ತಂದೆ-ತಾಯಿಯ ಜೀವನಾಂಶಕ್ಕೆ ಬಿಟ್ಟು ನಂತರ ಪಶ್ಚಿಮಕ್ಕೆ ಹಿಸ್ಸೆ ಮಾಡಿಕೊಂಡಿರುವ ಜಮೀನಿನ ನೇರಕ್ಕೆ ಮುಂದೆ ಹಂಚಿಕೊಳ್ಳತಕ್ಕದ್ದು ಎಂದು ಇದೆ ಎಂದರೆ ಸಾಕ್ಷಿಯು ಹೌದು ನಾವು ಆ ಪ್ರಕಾರ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ವಿಭಾಗ ಪತ್ರದಲ್ಲಿ ಯೋಗೇಗೌಡರ ಹಿಸ್ಸೆಯಲ್ಲಿ ಇದು ಮೂರೂ ಜನರು ಉಪಯೋಗಿಸಿಕೊಳ್ಳಲು 4 ಗುಂಟೆ ಹೆಚ್ಚಿಗೆ ಯೋಗೇಗೌಡರ ಹಿಸ್ಸೆಯ ಬಹುತ್ವದಲ್ಲಿ ಇರುತ್ತದೆ ಎಂದು ಬರೆಸಲಾಗಿದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ಸರ್ವೆ ನಂ. 95 ರಲ್ಲಿ ವಾದಿಗೆ 2 ಎಕರೆ, 1 ಮತ್ತು 2ನೇ ಪ್ರತಿವಾದಿಯರಿಗೆ ತಲಾ ಒಂದು ಎಕರೆಯಂತೆ ಎಂದು ಇದ್ದು, ಅದು ಒಂದೊಂದು ಎಕರೆಯಂತೆ ವಿಭಾಗ ಆಗಬೇಕು ಎಂದು ನೀವು ಹೇಳಿರುತ್ತೀರಿ ಆ ಬಗ್ಗೆ ಸದರಿ ವಿಭಾಗ ಪತ್ರದಲ್ಲಿ ಷರಾ ಇದೆಯೇ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಆ ರೀತಿ ಸದರಿ ವಿಭಾಗ ಪತ್ರದ ಉಳಿದ ಎಲ್ಲಾ ಅಂಶಗಳನ್ನು ಬರೆಸುವ ಸಂದರ್ಭದಲ್ಲಿ ಆ ಬಗ್ಗೆ ಷರಾವನ್ನು ಕೂಡ ಬರೆಸಲು ನಮಗೆ ಯಾವುದೇ ತೊಂದರೆ ಇರಲಿಲ್ಲ. ನಾನು ಸರ್ಕಾರಿ ನೌಕರನಾಗಿದ್ದು, 2ನೇ ಪ್ರತಿವಾದಿ ವ್ಯಾಪಾರ ವಹಿವಾಟು ಮಾಡಿಕೊಂಡಿದ್ದು, ವಾದಿಗೆ ತಿಳುವಳಿಕೆ ಇಲ್ಲದೇ ಇದ್ದುದ್ದರಿಂದ ಹಾಗೂ ವಾದಿಯ ಮಗಳು ಅಂಗವಿಕಲೆ ಆಗಿದ್ದರಿಂದ ಅವರಿಗೆ ಸರ್ವೆ ನಂ. 95 ರಲ್ಲಿ 1 ಎಕರೆ ಹೆಚ್ಚಿಗೆ ಸ್ವತ್ತನ್ನು ವಿಭಾಗದಲ್ಲಿ ಕೊಡಲಾಗಿತ್ತು ಎಂದರೆ ಸರಿಯಲ್ಲ. ಆ ರೀತಿ 1988-89ನೇ ಸಾಲಿನಿಂದಲೂ ವಾದಿ ಸರ್ವೆ ನಂ. 95ರಲ್ಲಿ 2 ಎಕರೆ ಜಮೀನ್ನು ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ 1 ಎಕರೆ ಮೋಸದ ಖಾತೆ ಮಾಡಿಸಿಕೊಂಡಿರುವುದನ್ನು ಹೊರತುಪಡಿಸಿ 2 ಎಕರೆ ಜಮೀನನ್ನು ಕೂಡ ವಾದಿಯೇ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ಈ ದಾವೆಯನ್ನು ಹೂಡುವ ಮೊದಲು ನನಗೆ ತಿಳುವಳಿಕೆ ಪತ್ರವನ್ನು ಕೊಟ್ಟಿದ್ದರು ಎಂದರೆ ಸರಿ. 2012 ರಲ್ಲಿ ಈ ದಾವೆಯನ್ನು ಹೂಡುವ ಮುಂಚೆ ನನಗೆ ಆರೋಗ್ಯದ ಸಮಸ್ಯೆ ಇದ್ದುದ್ದರಿಂದ ಸದರಿ ನೋಟೀಸಿಗೆ ಮರುತ್ತರವನ್ನು ಕೊಡಲು ಆಗಲಿಲ್ಲ. ಈ ದಾವೆಯನ್ನು ಹೂಡಿದ ನಂತರ ನ್ಯಾಯಾಲಯದಿಂದ ಸಮನ್ಸ್ ನನಗೆ ಜಾರಿಯಾದ ನಂತರವೂ ಕೂಡ ನಾನು ಲಿಖಿತ ಹೇಳಿಕೆಯನ್ನು ಸಲ್ಲಿಸಿಲ್ಲ ಎಂದರೆ ಸರಿ. ಆ ರೀತಿ ನಿಮಗೆ ಲಿಖಿತ ಹೇಳಿಕೆಯನ್ನು ಸಲ್ಲಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನನಗೆ ಬರಲು ಆಗಲಿಲ್ಲ, ನಾನು ಊರಿನಲ್ಲೇ ಇರಲಿಲ್ಲ ಎಂದು ನುಡಿಯುತ್ತಾರೆ. ರೀತಿ ನೀವು ಮೇಲ್ಮನವಿಯನ್ನು ಸಲ್ಲಿಸಿದ

ಸಂದರ್ಭದಲ್ಲಿ ಸದರಿ ಮೇಲ್ಮನವಿ ಅರ್ಜಿಯಲ್ಲಾಗಲೀ, ಲಿಖಿತ ಹೇಳಿಕೆಯಲ್ಲಾಗಲೀ ಅಥವಾ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಾಗಲೀ ಆ ರೀತಿ ತೊಂದರೆ ಆಗಿತ್ತು ಎಂದು ಇತ್ತಾ ಎಂದರೆ ಸಾಕ್ಷಿಯು ಹೌದು ಎಂದು ಹೇಳುತ್ತಾರೆ. ನನ್ನ ಪ್ರಕಾರ ಸರ್ವೆ ನಂ. 95ರ ಉಳಿಕೆ 1 ಎಕರೆಯಲ್ಲಿ ನಮಗೆ ಮೂರೂ ಜನರಿಗೂ ವಿಭಾಗ ಆಗಬೇಕು ಎಂಬುದನ್ನು ಹೊರತುಪಡಿಸಿ ಉಳಿದ ಎಲ್ಲಾ ಸರ್ವೆ ನಂಬರುಗಳ ಸ್ವತ್ತುಗಳಲ್ಲಿ ವಿಭಾಗ ಆಗಿರುವುದು ಸರಿಯಾಗಿದೆ ಎಂದರೆ ಸರಿ.

ಸರ್ವೆ ನಂ. 95ರ ಪೂರ್ವಕ್ಕೆ ಪಿಡಬ್ಲ್ಯೂಡಿ ರಸ್ತೆ, ಪಶ್ಚಿಮಕ್ಕೆ ಗೋಮಾಳ, ಉತ್ತರಕ್ಕೆ ರಾಮಚಂದ್ರೇಗೌಡರವರ ಜಮೀನು ಹಾಗೂ ದಕ್ಷಿಣಕ್ಕೆ ಕೃಷ್ಣೇಗೌಡರ ಜಮೀನು ಈ ಚೆಕ್ಕುಬಂದಿಯ ಒಳಗಡೆ 2 ಎಕರೆ ಜಮೀನು ಇದ್ದು ಅದನ್ನು ಈಗಲೂ ವಾದಿಯೇ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ತನ್ನ ಮಕ್ಕಳಿಗೆ ಒಂದು ಎಕರೆ ಸ್ವತ್ತನ್ನು ವಿಭಾಗ ಮಾಡಿಕೊಡಲು ಹೊರಟ ಸಂದರ್ಭದಲ್ಲಿ ಸರ್ವೆ ಮಾಡಿಸಲು ಹೋದಾಗ ವಾದಿ ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ. 2 ಎಕರೆ ಸ್ವತ್ತನ್ನು ವಾದಿಯೇ ಮಾಡುತ್ತಿದ್ದಾರೆ ಎನ್ನುವ ವಿಚಾರ ನನಗೆ ತಿಳಿದಿದ್ದರೂ ಕೂಡ ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

ಜೆ.ಎಂ.ಎಫ್.ಸಿ., ಹೊಳೆನರಸೀಪುರ.